ತುರ್ತು ಕಾರ್ಯಗಳ ಕಡೆ ಮೊದಲು ಗಮನ ಹರಿಸಿದ್ದು ನಂತರ ತಮ್ಮ ಕೆಲಸವನ್ನು ಕೈಗೆತ್ತಿಕೊಳ್ಳುವುದಾಗಿ ತಿಳಿಸಿದ್ದ.

'ಮ್ಯಾಮ್. ಮೆದುಳಿನ ಬಿಡಿ ಭಾಗಗಳನ್ನು ಅಳವಡಿಸುವುದು ಅಷ್ಟು ಸುಲಭವೇ? ಲ್ಯಾಬೋರೇಟರಿಯಲ್ಲಿ ಕೃತಕವಾಗಿ ಬೆಳೆಸಲು ಸಮಯ ಬೇಕಾಗುತ್ತದೆ' ಎಂದಷ್ಟೇ ಹೇಳಿ ಸಂಭಾಷಣೆ ಮೊಟಕುಗೊಳಿಸಿದ್ದ. ಅವಳು ಆ ವಿಚಾರವಾಗಿಯೇ ಲೆಕ್ಕ ಹಾಕುತ್ತಾ ಕಮೀಷನರ್ ಸವ್ಯಸಾಚಿಯವರು ಕರೆದ ಸಭೆಗೆ ಹಾಜರಾಗಿದ್ದಳು. ಪೂರ್ವಭಾವಿ ತಯಾರಿಯ ಜೊತೆ ಬಂದವಳು ಇತರೆ ಸಹಚರರೊಂದಿಗೆ ಸಭೆಯ ಸಭಾಂಗಣದಲ್ಲಿ ಹಾಜರಾದ ಕೆಲಹೊತ್ತಿಗೇ ಸವ್ಯಸಾಚಿ ಸಭೆ ಪ್ರಾರಂಭಿಸಿದ್ದರು.

'ಈ ಸಭೆಯಲ್ಲಿ ನಾವು ದಿನನಿತ್ಯ ಎದುರಿಸುವ ಸಮಸ್ಯೆಗಳ ಜೊತೆಗೆ ಮುಂದಿನ ದಿನಗಳಲ್ಲಿ ಕೈಗೊಳ್ಳಲಾಗುವ ಯೋಜನೆಗಳಿಗೆ ಸಹ ಪೂರ್ವ ತಯಾರಿ ನಡೆಸಬೇಕಾಗುತ್ತದೆ. ಸಭೆಯಲ್ಲಿ ಮುಕ್ತ ಚರ್ಚೆಗೆ ಅವಕಾಶವಿದೆ' ಎಂದು ಹೇಳಿದ ಸ್ವಲ್ಪ ಹೊತ್ತಿಗೆ ಅವರು ನಿಂತಿದ್ದ ವೇದಿಕೆಯು ರಸ್ತೆಯಂತೆ ತನ್ನ ಹಿನ್ನೆಲೆಯನ್ನು ಮಾರ್ಪಾಡಿಸಿಕೊಂಡಿತ್ತು. ರಿಯಲ್ ಟೈಮ್‌ನಲ್ಲಿ ರಸ್ತೆಯ ಚಿತ್ರಣಕ್ಕೆ ಅವರು ಮಿಥ್ಯಾ ವಾಸ್ತವದಲ್ಲಿ ಟೆಲಿಪೋರ್ಟ್ ಆಗಿದ್ದು ತಾವು ಪ್ರಸ್ತಾಪಿಸಲಿರುವ ಒಂದೊಂದು ವಿಷಯಕ್ಕೆ ಬಂದೊಡನೆಯೇ ವಾಸ್ತವ ಚಿತ್ರಣವು ಹಿನ್ನೆಲೆಯಲ್ಲಿ ಮೂಡಿ ಬರುತ್ತಿತ್ತು. ಪ್ರಾರಂಭದಲ್ಲಿ ಬುಲೆಟ್ ಮೆಟ್ರೋ, ರಸ್ತೆ ಹಾಗೂ ವಾಯು ಸಂಚಾರದ ಕಮೀಷನರ್‌ರವರು ತಮ್ಮ ವಿಚಾರ ಮಂಡಿಸಲು ಅವಕಾಶ ಕಲ್ಪಿಸಲಾಗಿತ್ತು.

ಇಂಟ್ರಾಸಿಟಿ ಬುಲೆಟ್ ಮೆಟ್ರೋ ಹಾಗೂ ಇಂಟರ್‌ಸಿಟಿ ಬುಲೆಟ್ ಎಕ್ಸ್‌ಪ್ರೆಸ್‌ಗಳ ಟೈ ಅಪ್‌ನಿಂದಾಗಿ ಪ್ರಯಾಣಿಕರು ಒಂದು ನಗರದಿಂದ ಮತ್ತೊಂದು ನಗರಕ್ಕೆ ಪ್ರಯಾಣ ಬೆಳೆಸುವುದು ಸುಲಭವಾಗಿದ್ದರೂ ಆಗಾಗ ಪ್ರತಿಭಟನಾಕಾರರು ನಮ್ಮ ಎಕ್ಸ್‌ಪ್ರೆಸ್‌ಗಳಿಗೆ ಲಗ್ಗೆ ಇಕ್ಕುವುದು ಮುಂದುವರೆದಿದೆ.

ಮೆಟ್ರೋ ಸಂಚಾರ ಕಮೀಷನರ್‌ರವರು ತಮ್ಮ ವಿಚಾರ ಹೇಳಿದಾಗ ಹನ್ನಾ ಅವರನ್ನು ಅನುಸರಿಸಿದಳು. 'ಸರ್, ಕೆಲವು ದಿನಗಳ ಹಿಂದೆ ಅರೆಮಾನವ ಪಡೆಯು ಬುಲೆಟ್ ಮೆಟ್ರೋದಲ್ಲಿ ದಾಂಧಲೆ ಎಬ್ಬಿಸಿದ್ದು ಇದಕ್ಕೆ ಉತ್ತಮ ನಿದರ್ಶನವಾಗಿದೆ.'

'ಈ ಸಮಸ್ಯೆ ಎಲ್ಲರಿಗೂ ಅನ್ವಯವಾಗುವಂತಿದ್ದು ಇದು ಕೇವಲ ಮೆಟ್ರೋ ವಿಭಾಗದ್ದಷ್ಟೇ ಸಮಸ್ಯೆಯಾಗಿರಲಾರದು' ಎಂದು ಸವ್ಯಸಾಚಿ ಅವರು ನಡುವೆ ಹೇಳಿದಾಗ ಇತರರೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸತೊಡಗಿದ್ದರು. 'ರಸ್ತೆ ಸಂಚಾರಕ್ಕೆ ಅಡಚಣೆಯಾದ ಪ್ರಯುಕ್ತ ಅಧಿಕ ಒತ್ತಡ ಬುಲೆಟ್ ಮೆಟ್ರೋ ಹಾಗೂ ವಾಯುಸಂಚಾರದ ಮೇಲೆ ಬಿದ್ದಿದ್ದು, ಕಡಿಮೆ ಅವಧಿಯಲ್ಲಿ ನೂಕುನುಗ್ಗಲು ತಪ್ಪಿಸಲು ಅಧಿಕಾರಿ, ಸಿಬ್ಬಂದಿಗಳು ಮಾಡಿದ ಯೋಜನೆ ಯಶಸ್ವಿಯಾದರೂ ಇದಕ್ಕೆ ಶಾಶ್ವತ ಪರಿಹಾರ ದೊರಕಬೇಕಿದೆ' ಎಂದು ವಾಯುಸಂಚಾರದ ಕಮೀಷನರ್ ಧ್ವನಿಗೂಡಿಸಿದ್ದರು.

'ಶಾಶ್ವತ ಪರಿಹಾರ ಬೇಕೆಂದರೆ ಆಡಳಿತ ವಿಭಾಗದವರು ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಈಗ ಅಲ್ಲಿಂದಲೇ ನಮ್ಮಲ್ಲಿ ಕೆಲವು ಮಾಹಿತಿಗಳನ್ನು ಕೇಳಿದ್ದಾರೆ...' ಎಂದು ತಮ್ಮ ಮಾತು ತುಸು ನಿಲ್ಲಿಸಿ ಹಿಂದಿನ ಘಟನೆಗಳ ಪುನರಾವಲೋಕನಕ್ಕೆ ಪರದೆಯ ಮೇಲೆ ಅವಕಾಶ ಕಲ್ಪಿಸಿದರು. ಇಡೀ ಘಟನಾವಳಿಗಳ ದೃಶ್ಯಗಳೆಡೆ ತಾವೇ ಟೆಲಿಪೋರ್ಟ್ ಆಗಿ ವಿವರಿಸತೊಡಗಿದರು.

'ಸಮಸ್ಯೆಯ ಮೂಲ ಇರುವುದು ಅರೆಮಾನವ ಪಡೆಯ ಸದಸ್ಯರ ಜೀವನಾಧಾರಕ್ಕೆ ಆಡಳಿತವು ತೃಣ ಮಾತ್ರ ವ್ಯವಸ್ಥೆ ಕಲ್ಪಿಸಿರುವುದು. ಅವರಿಗೆ ತಾವು ಸಹಜ ಜೀವನ ನಡೆಸಬೇಕಾದರೆ ಸೂಕ್ತ ಕೆಲಸ ಕಲ್ಪಿಸುವುದು ಅತ್ಯವಶ್ಯಕವಾಗಿದೆ. ಕೆಲವು ವೈದ್ಯಕೀಯ ಪರೀಕ್ಷೆಗಳನ್ನು ಅವರ ಮೇಲೆ ನಡೆಸಿದಾಗ ಹಲವರು ಅದರಲ್ಲಿ ವಿಫಲರಾದುದೇ ಅವರ ಆಕ್ರೋಶ ಮತ್ತಷ್ಟು ಹೆಚ್ಚಲು ಕಾರಣವಾಗಿದೆ. ಅವರಿಗೆ ಕಠಿಣ ತೆರನಾದ, ತ್ರಾಸದ ಕೆಲಸಗಳು ಒಗ್ಗದು. ಒಂದೇ ತೆರನಾದ ಕೆಲಸವನ್ನು ಶೀಘ್ರದಲ್ಲಿ ಮಾಡಲು ಅವರ ದೇಹ ಪ್ರಕೃತಿಗೆ ಆಗದು. ಇನ್ನು ಉಳಿದಿರುವುದು ಮೆದುಳಿಗೆ ಕಸರತ್ತು ನೀಡುವಂಥಹ ಕೆಲಸಗಳು. ಇದೇ ವಿಚಾರದ ಬಗ್ಗೆ ಆಡಳಿತ ವಿಭಾಗದವರಿಗೆ ಉತ್ತರ ನೀಡಬೇಕಿದೆ.'

'ಅದಕ್ಕೆ ನಾವುಗಳು ಸಲಹೆ ನೀಡಬೇಕಾಗಿದೆಯೇ?' ಸಭಿಕರೊರ್ವರು ಕೇಳಿದ್ದರು.

'ಅಪಘಾತಗಳು ಕೆಲವೊಮ್ಮೆ ಅವರ ತಪ್ಪಿಲ್ಲದೆ ಜರುಗಿದ್ದು ಅದರ ಪರಿಣಾಮವಾಗಿ ಆದ ಊನಗಳಿಗೆ ಕೃತಕ ವ್ಯವಸ್ಥೆಯಾಗಿರುವುದಕ್ಕೆ ಜವಾಬ್ದಾರಿ ಯಾರು ಹೊರಬೇಕಿದೆ ಎಂಬುದು ಕ್ಲಿಷ್ಟ ಪ್ರಶ್ನೆಯಾಗಿದೆ. ನಮ್ಮ ವಿಭಾಗಕ್ಕೆ ಅಪಘಾತಗಳು ಅನ್ವಯವಾಗುವುದರಿಂದ ಅವರ ಜೀವನೋಪಾಯಕ್ಕೂ ನಮ್ಮಿಂದಲೇ ಸಲಹೆ ಪರಿಹಾರಗಳನ್ನು ಆಡಳಿತ ವಿಭಾಗದವರು ಅಪೇಕ್ಷಿಸುತ್ತಿದ್ದಾರೆ' ಎಂದು ಸವ್ಯಸಾಚಿ ಉತ್ತರಿಸಿದ್ದರು.

'ರಸ್ತೆ ಸಂಚಾರದ ಅಂಕಿ ಅಂಶಗಳ ಗಣನೆಗೆ ನಮ್ಮಲ್ಲಿನ ಉಪಕರಣಗಳು ಸಾಕಾಗಿವೆ. ಅದನ್ನು ನಿರ್ವಹಿಸಿ ಗ್ರಾಫಿಕಲ್ ನೋಟ್ಸ್ ಅನ್ನು ಉಪಗ್ರಹ ನೀಡಿದ ಅಂಕಿಅಂಶಗಳಿಗೆ ಹೋಲಿಸಿ ಫಲಿತಾಂಶಗಳನ್ನು ವಿಶ್ಲೇಷಿಸುವ ಕೆಲಸ ಅರೆಮಾನವ ಪಡೆಯ ಸದಸ್ಯರಿಗೆ ನೀಡಬಹುದು' ಎಂದು ಅವಿರತ್ ತನ್ನ ಅಭಿಪ್ರಾಯ ಮಂಡಿಸಿದ. 'ಅರೆಮಾನವ ಪಡೆಗೆ ಕೆಲಸ ನೀಡಲೇಬೇಕೆಂದಾದರೆ ರೊಬೋಟ್‌ಗಳು ನಿರ್ವಹಿಸುವ ಕೆಲವು ಕೆಲಸಗಳನ್ನು ಅವರಿಗೆ ನೀಡಬೇಕಾಗುತ್ತದೆ' ಎಂದು ಹನ್ನಾ ಜೊತೆಗೂಡಿದಳು.

'ಅದು ಯಾವುದೆಂದು ಕಾರಣಗಳೊಂದಿಗೆ ತಿಳಿಸುವಿರಾ?'

'ಹಲವಾರು ಬಾರಿ ಟ್ರಾಫಿಕ್ ಜಂಕ್ಷನ್‌ಗಳಲ್ಲಿ ನಾವು ಪಾದಚಾರಿಗಳಿಗೆ ಎಷ್ಟು ಸೂಚನೆ ನೀಡಿದರೂ ಅವರು ನಿಯಮಗಳನ್ನು ಉಲ್ಲಂಘಿಸುವುದೋ ಇಲ್ಲವೇ ವಾಹನಗಳೇ ಉಲ್ಲಂಘಿಸುವ ಪ್ರಸಂಗಗಳಿವೆ. ಅಂತಹ ಕಡೆ ಎಚ್ಚರಿಕೆ ನೀಡಲು ಪಡೆಯ ಸದಸ್ಯರನ್ನು ನಿಯೋಜಿಸಬಹುದು.'

'ಅರೆಮಾನವ ಪಡೆಯ ಸದಸ್ಯರು ನೋವನ್ನು ಅನುಭವಿಸಿದವರಾದ್ದರಿಂದ ಡ್ರೈವಿಂಗ್ ಶಾಲೆಗಳಿಗೆ ನಿಯೋಜಿಸಬಹುದು. ಅವರ ಬದುಕೇ ಇತರರಿಗೆ ಒಂದು ಪಾಠವಾಗುತ್ತದೆ' ಮತ್ತೊಬ್ಬರು ಹೇಳಿದರು.

'ಹಲವಾರು ಬಾರಿ ಅಪಘಾತಗಳಾದಾಗ ಅಪಘಾತಕ್ಕೆ ಕಾರಣಗಳನ್ನು ತಿಳಿದುಕೊಳ್ಳಲು ನಾವು ಕಣ್ಗಾವಲು ಕ್ಯಾಮೆರಾ ದೃಶ್ಯಾವಳಿಗಳನ್ನು ಅವಲಂಬಿಸುತ್ತೇವಾದರೂ ವಾಹನದೊಳಗಿನ ಟ್ರಾಮಾ ಸೆನ್ಸಾರ್ ಹಾಗೂ ಟೈರ್‌ಗಳಿಗೆ ಅಳವಡಿಸಲಾದ ಸೆನ್ಸಾರ್‌ಗಳಿಂದಲೂ ದೊರಕುವ ಮಾಹಿತಿ ಉಪಯುಕ್ತವಾಗಿರುತ್ತವೆ. ಇವುಗಳೆಲ್ಲದರ ಕ್ರೋಡೀಕರಣವನ್ನು ವಿಶ್ಲೇಷಿಸಲು ಕಂಪ್ಯೂಟರ್ ತಂತ್ರಾಂಶ ಸಹಾಯಕವಾದರೂ ಮನುಷ್ಯನ ತಪ್ಪುಗ್ರಹಿಕೆಯಿಂದ ಆದ ಕೃತ್ಯಾಪರಾಧಗಳು ಮುಂತಾದವುಗಳ ವಿಶ್ಲೇಷಣೆಗೆ ಮನುಷ್ಯರ ಸಹಾಯವೇ ಬೇಕಿದೆ. ಇಲ್ಲಿ ಪಡೆಯ ಸದಸ್ಯರು ಉಪಯೋಗಕ್ಕೆ ಬರಬಹುದು' ಎಂದು ರಸ್ತೆಯ ಕಮೀಷನರ್ ತಮ್ಮ ಸಲಹೆ ನೀಡಿದ್ದರು.

ಸಭಿಕರಿಂದ ಉತ್ಸಾಹಯುತವಾದ ಪ್ರತಿಕ್ರಿಯೆ ಬರುತ್ತಿದ್ದಂತೆ ವಾಯ್ಸ್ ಕ್ರಿಪ್ಷನ್ ತಂತ್ರಾಂಶ ಅವರ ಧ್ವನಿಯನ್ನು ಗ್ರಹಿಸಿ ನಡಾವಳಿ ರೂಪದಲ್ಲಿ ಪರದೆಯ ಮೇಲೆ ಆಗಿಂದಾಗ್ಗೆ ಮೂಡಿಸುತ್ತಿತ್ತು. ಈ ವಿಚಾರವಾಗಿ ಆಡಳಿತ ವಿಭಾಗದಿಂದ ಆದೇಶ ಹೊರಟೊಡನೆಯೇ ಪ್ರಾಯೋಗಿಕವಾಗಿ ಕೆಲವು ಕಡೆ ಪಡೆಯ ಸದಸ್ಯರನ್ನು ನಿಯೋಜಿಸಿ ಸಕಾರಾತ್ಮಕ ಫಲಿತಾಂಶ ಬಂದೊಡನೆಯೇ ಕಾಯಂಗೊಳಿಸಬಹುದೆಂದು ಸವ್ಯಸಾಚಿ ಅವರು ತಿಳಿಸಿದಾಗ ಇಡೀ ಸಭೆಯಿಂದ ಜೋರು ಕರತಾಡನ ಮೊಳಗಿತ್ತು. ಇದಾದ ಬಳಿಕ ಅಂದಿನ ಮತ್ತೊಂದು ಜ್ವಲಂತ ವಿಷಯದೆಡೆ ಮಾತುಕತೆ ಹೊರಳಿತ್ತು.

ಕೆಲವು ದಿನಗಳ ಬಳಿಕ ಸಾರ್ವಜನಿಕರು ಚಂದ್ರನೆಡೆಗೆ ಪ್ರವಾಸ ಕೈಗೊಳ್ಳುವುದರಿಂದ ಇಡೀ ವಿಶ್ವದ ಹಲವಾರು ದೇಶಗಳಿಂದ ಸಂಚಾರ ನಿಯಂತ್ರಣಕ್ಕೆ ಅಧಿಕಾರಿಗಳನ್ನು ನಿಯೋಜಿಸುವ ಪ್ರಸ್ತಾವನೆ ಎದುರಿಗಿತ್ತು. ಕೆಲವು ತಿಂಗಳುಗಳ ಕಾಲ ಸರದಿಯಂತೆ ಅಧಿಕಾರಿಗಳನ್ನು ಕಳುಹಿಸಬೇಕಾಗಿರುವುದರಿಂದ, ಅದರ ಪಟ್ಟಿಯನ್ನು ಅಧಿಕಾರಿಗಳ ಪೂರ್ವ ಸಮ್ಮತಿಯೊಂದಿಗೆ ಸಿದ್ಧಪಡಿಸಬೇಕಿತ್ತು.

'ಬುಲೆಟ್ ಮೆಟ್ರೋ, ರಸ್ತೆ ಹಾಗೂ ವಾಯುಸಂಚಾರದ ಕಮೀಷನರ್‌ಗಳಿಂದ ಪಟ್ಟಿ ಬರಬೇಕಿದೆ.'

'ಸರ್, ನಮ್ಮಲ್ಲಿರುವ ಅಧಿಕಾರಿಗಳು ಮೊದಲು ಪೂರ್ವಭಾವಿ ವೈದ್ಯಕೀಯ ಪರೀಕ್ಷೆಗಳಿಗೆ ಒಳಪಟ್ಟು ಕೆಲವು ತರಬೇತಿಯನ್ನೂ ಸಹ ನೀಡಿ ಪಟ್ಟಿ ಸಿದ್ಧಪಡಿಸಬೇಕಿರುವುದರಿಂದ ಸಮಯ ಬೇಕಾಗುತ್ತದೆ' ರಸ್ತೆ ಸಂಚಾರ ಕಮೀಷನರ್ ಮಾತಿಗೆ ಇತರ ಕಮೀಷನರ್‌ರವರಿಂದ ಸಹಮತ ಸಿಕ್ಕಿತ್ತು.

**ಸಶೇಷ**